ಆದರೆ ನಿವೇಶನ ಸಿಕ್ಕದೆ ಅಲ್ಲಿ ಮಾಡಬೇಕೆಂದರೆ ಅದು ಸಾಧ್ಯವಾಗುವುದಿಲ್ಲ. ಆ ದಿಸೆಯಲ್ಲಿ ಬೆಂಗಳೂರು ನಗರದ ಶಾಸಕರ ಮತ್ತು ಬೆಂಗಳೂರು ಮಹಾನಗರ ಪಾಲಿಕೆಯ ಜೊತೆ ಚರ್ಚಿಸಿ ಸೂಕ್ತ ಸ್ಥಳ ಸಿಕ್ಕಿದರೆ ಅದರ ಬಗ್ಗೆ ಪರಿಶೀಲಿಸಬಹುದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಆರ್. ದಯಾನಂದರಾವ್:– ಎಂಎಲ್ಎಗಳನ್ನು ತಾವು ಎಷ್ಟು ದಿವಸಗಳಲ್ಲಿ ಕರೆಸುತ್ತೀರಾ ? ಯಾವಾಗ ತಾವು ನಿರ್ಣಯವನ್ನು ತೆಗೆದುಕೊಳ್ಳುತ್ತೀರೆಂದು ನಿಖರವಾಗಿ ಸದನಕ್ಕೆ ತಿಳಿಸಿದರೆ ಒಳ್ಳೆಯದು.

ಶ್ರೀ ಪ್ರಭಾಕರ ಎಸ್. ರಾಣೆ:– ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದ್ದೇನೆ. ಸೂಕ್ತವಾದ ಸ್ಥಳ ಸಿಕ್ಕಿದರೆ ಆ ನಮ್ಮ ನಿರ್ಣಯವನ್ನು ಮರು ಪರಿಶೀಲನೆ ಮಾಡಬಹುದು. ವಿಚಾರವನ್ನೆಲ್ಲಾ ಶಾಸಕರಿಗೆ ತಿಳಿಸುತ್ತೇನೆ.

ಶ್ರೀ ಆರ್. ದಯಾನಂದರಾವ್:– ತಾವು ಮೇಯರ್ ಅವರನ್ನು ಕರೆಸಿ ಸ್ಥಳವನ್ನು ಕೇಳಿದರೆ ಅವರು ಕೊಡುವುದಕ್ಕೆ ಸಿದ್ಧರಿದ್ದಾರೆ.

ಶ್ರೀ ಪ್ರಭಾಕರ ಎಸ್. ರಾಣೆ:– ಎಲ್ಲಾ ಆಯಿತು ಎಂದು ಹೇಳಿದ್ದೇನೆ.

ಬೌರಿಂಗ್ ಹಾಗೂ ಲೇಡಿ ಕರ್ಜನ್ ಆಸ್ಪತ್ರೆಗೆ ಎದ್ಮುತ್ ದೋಬಿಖಾನೆ

1160: ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ):–

ವೈದ್ಯಕೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಎಲೆಕ್ಟ್ರಿಕ್ ಲಾಂಡ್ರಿ ಹಾಗೂ ಇನ್ಸಿನಿರೇಟರ್‌ಗಳನ್ನು ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಗೆ ಸರಬರಾಜು ಮಾಡಲು ಸರ್ಕಾರದಿಂದ ಪ್ರಸ್ತಾವನೆ ಆಗಿದೆಯೇ;

ಆ) ಮೇಲಿನ ಉಪಕರಣಗಳಿಂದ ಆಸ್ಪತ್ರೆ ಹಾಗೂ ಸುತ್ತಮುತ್ತಲಿನ ಪರಿಸರವು ಮಾಲಿನ್ಯಗೊಂಡಿದ್ದು ಅದರಿಂದ ಕಾಯಿಲೆಗೆ ದಾರಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಮೇಲಿನ ಉಪಕರಣಗಳನ್ನು ಆಸ್ಪತ್ರೆಗೆ ಬರುವ ರೋಗಿಗಳ ಉತ್ತಮ ಸೌಲಭ್ಯಕ್ಕಾಗಿ ಒದಗಿಸುವುದು ಅಗತ್ಯ ಇರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಜಿ. ರಾಮಕೃಷ್ಣ (ವೈದ್ಯಕೀಯ ಶಿಕ್ಷಣ ಸಚಿವರು):–

ಅ) ಪರಿಶೀಲನೆಯಲ್ಲಿದೆ.

ಆ) ಇಲ್ಲ.

ಇ) ಮೇಲಿನ ಉಪಕರಣಗಳನ್ನು ಒದಗಿಸುವ ಬಗ್ಗೆ ಪರಿಶೀಲನೆಯಲ್ಲಿದೆ.

ಶ್ರೀ ಎ.ಕೆ. ಅನಂತಕೃಷ್ಣ:– ಮಾನ್ಯ ಅಧ್ಯಕ್ಷರೇ, ಈ ಉತ್ತರ ಸಮಂಜಸವಾಗಿಲ್ಲ ಎಂದು ಹೇಳಬಯಸುತ್ತೇನೆ. ಸುಮಾರು ಮೂರು ವರ್ಷಗಳಿಂದ ಈ ಪ್ರಶ್ನೆ ಹಾಕುತ್ತಿದ್ದೇನೆ. ಇಬ್ಬರು ಮುಖ್ಯಮಂತ್ರಿಗಳು ಆಸ್ಪತ್ರೆಗೆ ಬಂದು ಹೋಗಿದ್ದಾರೆ. ಇಬ್ಬರು ಆರೋಗ್ಯ ಮಂತ್ರಿಗಳು ಬಂದು ಹೋಗಿದ್ದಾರೆ. ಎಲ್ಲರೂ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಬೆಂಗಳೂರಿನ ಪ್ರಮುಖವಾದ ಬೌರಿಂಗ್ ಆಸ್ಪತ್ರೆಗೆ ಅವಶ್ಯಕವಾಗಿ ಎಲೆಕ್ಟ್ರಿಕ್ ಲಾಂಡ್ರಿ ಹಾಗೂ ಇನ್ಸಿನಿರೇಟರ್ ಬೇಕು ಎಂದರೆ ಇನ್ನೂ ಪರಿಶೀಲನೆಯಲ್ಲಿ ಇದೆ ಎಂದರೆ ಇನ್ನು ಯಾವ ಕಾಲಕ್ಕೆ ಸ್ವಾಮಿ ಕೊಡುವುದು ? ಮಾನ್ಯ

ಮುಖ್ಯಮಂತ್ರಿಗಳೂ ಬಂದು ಹೋಗಿದ್ದಾರೆ. ಆರೋಗ್ಯ ಮಂತ್ರಿಗಳು ಬಂದು ಹೋಗಿದ್ದು ಈ ರೀತಿ ಪರಿಶೀಲನೆಯ ಉತ್ತರ ಕೊಡುತ್ತಾರೆಂದರೆ ಇನ್ನು ಮುಂದೆ ಪ್ರಶ್ನೆಯನ್ನು ಹಾಕಬೇಕೇ ಅಥವಾ ಬೇಡವೇ ಎನ್ನುವ ವಿಚಾರವನ್ನು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ಕೇಳಬಯಸುತ್ತೇನೆ.

ಶ್ರೀ ಜಿ. ರಾಮಕೃಷ್ಣ:– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಜೊತೆ ನಾನೂ ಆಸ್ಪತ್ರೆಗೆ ಹೋಗಿ ನೋಡಿದ್ದೇನೆ. ಅಲ್ಲಿಗೆ ಈ ಎಲೆಕ್ಟ್ರಿಕ್ ಹಾಗೂ ಇನ್‌ಸಿನಿರೇಟರ್‌ಗಳು ಬೇಕಾಗಿವೆ. ಇಲ್ಲಿಯವರೆಗೆ ಕಟ್ಟಿಗೆ ಮತ್ತು ಸೀಮೆಎಣ್ಣೆ ಹಾಕಿ ಅಲ್ಲಿರತಕ್ಕ ಅನುಪಯೋಗಿ ವಸ್ತುಗಳನ್ನು ಸುಡುತ್ತಿದ್ದಾರೆ. ಆದರೆ ಈ ವಿಚಾರವನ್ನು ಬಹಳ ವರ್ಷಗಳಿಂದ ಕೇಳುತ್ತಿದ್ದು ಇನ್ನೂ ಕೆಲಸ ಆಗಿಲ್ಲವೆಂದು ಮಾನ್ಯ ಸದಸ್ಯರು ಬೇಜಾರುಪಟ್ಟುಕೊಂಡಿದ್ದಾರೆ. ಇದನ್ನು ತೀವ್ರಗತಿಯಲ್ಲಿ ಎಂದರೆ ಬಹುತೇಕ ಮುಂದೆ ಈ ಮಾತು ಬಾರದ ಹಾಗೆ, ಕೆಲಸ ಆಗಲಿಲ್ಲ ಎನ್ನುವ ಮಾತು ಬಾರದ ಹಾಗೆ, ಬರಲಾರದ ಹಾಗೆ ನೋಡಿಕೊಂಡು ಹೋಗುತ್ತೇವೆ.

ಶ್ರೀ ಎ.ಕೆ. ಅನಂತಕೃಷ್ಣ:– ಮಾನ್ಯ ಅಧ್ಯಕ್ಷರೇ, ಇದು ಬಹಳ ಮುಖ್ಯವಾಗಿದ್ದು, ಇದರ ಕಳಕಳಿಯನ್ನು ಅರಿತು ತಾವು ನಮ್ಮ ರಕ್ಷಣೆಗೆ ಬರಬೇಕು. ನಾವು ಪ್ರಶ್ನೆ ಹಾಕಿದರೆ ಇಲ್ಲಿ ಪರಿಶೀಲನೆಯಲ್ಲಿದೆ ಎಂದು ಉತ್ತರ ಬರುತ್ತದೆ. ನನ್ನ ಇನ್ನೊಂದು ಪ್ರಶ್ನೆಯಲ್ಲಿ ಉಪಕರಣಗಳು ಇಲ್ಲದ ಕಾರಣ ಆಸ್ಪತ್ರೆ ಹಾಗೂ ಸುತ್ತಮುತ್ತಲಿನ ಪರಿಸರವು ಮಾಲಿನ್ಯಗೊಂಡಿದ್ದು, ಆದರಿಂದ ಕಾಯಿಲೆಗೆ ದಾರಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿರುವುದಕ್ಕೆ 'ಇಲ್ಲ' ಎಂದು ಉತ್ತರ ಕೊಟ್ಟಿದ್ದಾರೆ. ಈಗ ಸ್ವಲ್ಪ ಹೊತ್ತಿನ ಹಿಂದೆಯೇ ಮಾನ್ಯ ಮಂತ್ರಿಗಳು ಮಾತನಾಡಿ, ಕಟ್ಟಿಗೆ ಹಾಗೂ ಸೀಮೆಎಣ್ಣೆ ಹಾಕಿ ಸುಡುತ್ತೇವೆಂದರು. ಇದರಿಂದ ವಾತಾವರಣ ಕಲುಷಿತವಾಗುವುದಿಲ್ಲವೇ ? ಮತ್ತು ಗಲೀಜು ಎಲ್ಲಾ ಹೊರಗಡೆ ಹೋಗುತ್ತಾ ಇದ್ದರೆ ಅದರ ಮಾಲಿನ್ಯದಿಂದಾಗಿ ಕಾಯಿಲೆ ಬರುವುದಿಲ್ಲವೇ ? ಏನೂ ಆಗಿಲ್ಲ ಎಂದು ಹೇಳಿದರೆ ಇನ್ನು ಯಾರನ್ನು ನಂಬಿಕೊಂಡು ಜೀವನ ಮಾಡುವುದು ? ದಯೆಮಾಡಿ ಹೇಳಬೇಕು. ಈ ರೀತಿ ಉತ್ತರ ಕೊಡುವುದು ಸರಿಯಾದುದಲ್ಲ.

ಶ್ರೀ ಜಿ. ರಾಮಕೃಷ್ಣ:– ಮಾನ್ಯಸದಸ್ಯರು ಹೇಳಿದಂತೆ ಅಷ್ಟೊಂದು ಮಾಲಿನ್ಯಗೊಂಡು ವಾತಾವರಣ ಕೆಡುತ್ತಿದೆಯೆಂದಾಗುವುದಿಲ್ಲ. ಬಹಳಷ್ಟು ಸಣ್ಣ ಪ್ರಮಾಣದಲ್ಲಿ ಅದು ಆಗುತ್ತಿದೆ. ಸಂಪೂರ್ಣ ಹೊಗೆ ಕೂಡಿ ವಾತಾವರಣ ಹದಗೆಡುತ್ತಿದೆ ಎನ್ನುವುದು ಸರಿಯಲ್ಲ. ಮಾನ್ಯ ಸದಸ್ಯರು ಏನು ಕೇಳಿದ್ದಾರೆ ಅದು ಸರಿ ಇದೆ. ಈ ಮಾಲಿನ್ಯದಿಂದಲೇ ತೊಂದರೆ ಆಗಿ ಆಸ್ಪತ್ರೆ ಸೇರಿದ್ದಾರೆ ಎನ್ನುವುದು ಸರಿಯಲ್ಲ. ಇಷ್ಟು ಸಣ್ಣ ಪ್ರಮಾಣದಲ್ಲಿ ಸುಡುವುದರಿಂದ ತೊಂದರೆ ಆಗುತ್ತದೆಯೆಂದು ಹೇಳುವುದು ಸರಿಯಲ್ಲ. ಕೇಳತಕ್ಕ ಪ್ರಶ್ನೆಗೆ ಇಷ್ಟೇ ಉತ್ತರ ಹೇಳುತ್ತೇನೆ. ತಮ್ಮ ಬೇಡಿಕೆ ಏನಿದೆ ಅದನ್ನು ತ್ವರಿತಗತಿಯಲ್ಲಿ ಪೂರ್ಣ ಮಾಡುತ್ತೇವೆನ್ನುವ ಭರವಸೆ ಕೊಡುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ:– ನಾನು ಬೆಂಗಳೂರಿನಲ್ಲಿ 50 ವರ್ಷಗಳಿಂದ ವಾಸ ಮಾಡುತ್ತಿದ್ದೇನೆ. ಈ ವಿಭಾಗದಲ್ಲಿ ನಾನು 3 ಸಾರಿ ಗೆದ್ದು ಬಂದಿದ್ದೇನೆ. ಅಲ್ಲಿ ಸುತ್ತಮುತ್ತ ಏನೆಲ್ಲಾ ನಡೆಯುತ್ತದೆನ್ನುವ ವಿಚಾರ ನನಗೆ ತಿಳಿದಿದೆ. ಅಲ್ಲಿ ಎಲೆಕ್ಟ್ರಿಕ್ ಲಾಂಡ್ರಿ ಇಲ್ಲದೆ ಬಟ್ಟೆ ಒಗೆದ ಮೇಲೆ ಆ ಗಲೀಜೆಲ್ಲಾ ರಸ್ತೆಗೆ ಬಂದು ಸುತ್ತಮುತ್ತ ಬಹಳ ತೊಂದರೆ ಆಗಿದೆ. ನಾನೇ ಅಲ್ಲಿ ಚರಂಡಿಯನ್ನು ಕ್ಲೀನ್ ಮಾಡಿಸುತ್ತಿದ್ದೇನೆ. ಅಲ್ಲಿ ಒಳಗೆ ಇರುವವರಿಗೆ ತೊಂದರೆಯಾಗುತ್ತಿದೆ. ಏನೂ ತೊಂದರೆ ಆಗಿಲ್ಲ ಎಂದರೆ ಹೇಗೆ ? ತಾವು ಈ ರೀತಿ ಮಾತನಾಡುತ್ತೀರೆಂದರೆ ನನಗೆ ಬೇಜಾರು ಆಗುತ್ತದೆ. ನಾವು ಅಲ್ಲಿಯ ಜನರನ್ನು ನಿರ್ನಾಮ ಆಗುವುದಕ್ಕೆ ಬಿಡಬೇಕೇ ?

ಶ್ರೀ ಜಿ. ರಾಮಕೃಷ್ಣ:– ತೀವ್ರಗತಿಯಲ್ಲಿ ನಾವು ಇದನ್ನು ಈಡೇರಿಸುತ್ತೇವೆ.

ಶ್ರೀ ಎ.ಕೆ. ಅನಂತಕೃಷ್ಣ:– ನನಗಂತೂ ಈ ರೀತಿಯ ಉತ್ತರವನ್ನು ತಾವು ಕೊಡಬಾರದು ಎಂದು ನಾನಂತೂ ಹೇಳುತ್ತೇನೆ.

ಕರಾವಳಿ ಪ್ರದೇಶದಲ್ಲಿ ಹೂಳೆತ್ತುವುದರ ಬಗ್ಗೆ

413 (1112): ಶ್ರೀ ವಿಜಯ ಕುಮಾರ ಶೆಟ್ಟಿ (ಸುರತ್ಕಲ್):–

ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಕರಾವಳಿಯಲ್ಲಿ ಹೂಳೆತ್ತದೆ ಇರುವ ಅಳಿವೆ ದ್ವಾರಗಳಲ್ಲಿ ಮೀನುಗಾರರು ಅಪಾಯಕ್ಕೀಡಾಗುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದಕ್ಕಾಗಿ ಡ್ರೆಡ್ಜಿಂಗ್ ಕೈಗೊಳ್ಳಲು ಸರ್ಕಾರವು 1992-93ರಲ್ಲಿ ಮೀಸಲಿಟ್ಟ ಹಾಗೂ ಖರ್ಚು ಮಾಡಿದ ಹಣವೆಷ್ಟು;

ಇ) ನವಮಂಗಳೂರು ನಿರ್ಮಾಣ ಸಂದರ್ಭದಲ್ಲಿ ಆಶ್ವಾಸನೆ ನೀಡಿದಂತೆ ಮೀನುಗಾರರಿಗೆ ಪ್ರತ್ಯೇಕ ಜೆಟ್ಟಿ ನಿರ್ಮಿಸುವ ಕಾರ್ಯದತ್ತ ಕೈಗೊಂಡ ಕ್ರಮಗಳೇನು ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು):–

ಅ) ಹೌದು.

ಆ) ರೂ. 2.65 ಕೋಟಿ ಮೀನುಗಾರಿಕೆ ಇಲಾಖೆಯಲ್ಲಿ ಮೀಸಲಿಟ್ಟಿತ್ತು. ಆದರೆ ಅಲ್ಲಿ ತಡೆಗೋಡೆ ನಿರ್ಮಾಣದ ಕಾರ್ಯ ಸ್ಥಗಿತವಾಗಿರುವುದರಿಂದ ಅಳಿವೆಯಲ್ಲಿ ಹೂಳೆತ್ತುವಿಕೆ ಮಾಡಲಿಲ್ಲವಾದ್ದರಿಂದ ಹಣ ಖರ್ಚಾಗಲಿಲ್ಲ.

ಇ) ನವಮಂಗಳೂರು ಬಂದರು, ವಾಣಿಜ್ಯ ನೌಕಾ ಚಟುವಟಿಕೆ ತುಂಬಿರುವುದರಿಂದ ಮೀನುಗಾರಿಕೆಗೆ ಪ್ರತ್ಯೇಕ ಸ್ಥಳ ಕಾದಿರಿಸಲು ಸಾಧ್ಯವಿಲ್ಲ.

ಶ್ರೀ ವಿಜಯಕುಮಾರ್ ಶೆಟ್ಟಿ:– ಮಾನ್ಯ ಅಧ್ಯಕ್ಷರೆ, ಸಾಧಾರಣ ಕಳೆದ ಮೂರು ವರ್ಷಗಳಿಂದ ಮೂರು ಜನ ಮೀನುಗಾರಿಕಾ ಸಚಿವರು ಬಂದಿದ್ದಾರೆ. 10-15 ವರ್ಷಗಳಿಂದ ಹೂಳೆತ್ತುವ ಕೆಲಸ ಮಾಡಲಿಲ್ಲ. ಪ್ರತಿ ವರ್ಷ ಪ್ರಾಮಿಸ್ ಕೊಡುತ್ತಾರೆ, ಹೋಗುತ್ತಾರೆ. ಮಳೆಗಾಲದಲ್ಲಿ ದೋಣಿಗಳ ಅಪಘಾತಗಳು ಆಗುತ್ತಿವೆ. ಮೀನುಗಾರರು ಬಹಳಷ್ಟು ಸಂಕಷ್ಟದಲ್ಲಿದ್ದಾರೆ. ಸೌತ್‌ಬ್ರೇಕ್ ವಾಟರ್‌ನಲ್ಲಿ ಕೆಲಸ ಶುರು ಮಾಡಿಲ್ಲ. ನಾರ್ತ್‌ಬ್ರೇಕ್ ವಾಟರ್‌ನಲ್ಲಿ ಕೆಲಸ ಶುರು ಮಾಡಲಿಲ್ಲ. ಒಂದು ಕಡೆ ಹೂಳು ಶೇಖರಣೆ ಆಗಿ ದೋಣಿಗಳ ಅಪಘಾತಗಳು ಆಗುತ್ತಿವೆ. ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮೀನುಗಾರಿಕೆಯಿಂದ ಸುಮಾರು 58 ಕೋಟಿ ವಿದೇಶಿ ವಿನಿಮಯ ಆಗುತ್ತಿದೆ. ಆದರೆ ಮೀನುಗಾರರಿಗೆ ಬೇಕಾದಂಥ ಸವಲತ್ತುಗಳು ಸಾಧಾರಣ 15 ವರ್ಷಗಳಿಂದ ಪೂರ್ಣಗೊಳ್ಳದೆ ನೆನೆಗುದಿಗೆ ಬಿದ್ದಿದೆ. ಮಾನ್ಯ ಮಂತ್ರಿಗಳು ನಮ್ಮ ಜಿಲ್ಲೆಯವರೇ ಇದ್ದಾರೆ. ಅವರಿಗೆ ಇದರ ಬಗ್ಗೆ ಸಂಪೂರ್ಣವಾದ ಅನುಭವವಿದೆ. ಮೊದಲಿನವರು ಬರುತ್ತಾರೆ ಹೋಗುತ್ತಾರೆ ಹೊರತು ಕೆಲಸ ಮಾತ್ರ ಆಗಲಿಲ್ಲ. ಮಳೆಗಾಲದಲ್ಲಿ ಒಂದು ಸಲ ಮೀಟಿಂಗ್ ಕರೆಯುತ್ತಾರೆ, ಮೀಟಿಂಗ್‌ನಲ್ಲಿ ಆಶ್ವಾಸನೆಯನ್ನು ಕೊಡುತ್ತಾರೆ. ಆದರೆ ಅದು ಜಾರಿ ಆಗಿಲ್ಲ. ಇದಕ್ಕಿಂತ ಗಹನವಾದ ವಿಷಯ ಬೇರೆ ಇಲ್ಲ. ತಾವು ಇದರ ಬಗ್ಗೆ ದಯವಿಟ್ಟು ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ:– ರಾಜ್ಯದ ಹೆಚ್ಚಿನ ಬಂದರುಗಳಲ್ಲಿ ಅಳಿವೆ ದ್ವಾರಗಳಲ್ಲಿ ಹೂಳು